***P.W-1***

**<u>ದಿನಾಂಕಃ 22-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ</u>** 1 ನೇ ಎದುರುದಾರರ ಪರ ವಕೀಲರಾದ ಶ್ರೀ ಎನ್ ಐ ಹೆಚ್ ವಕೀಲರನ್ನು ಪದೇ-ಪದೇ ಕೂಗಿ ಕರೆಯಿಸಲಾಗಿ, ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು .

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎಸ್ .ಸಿ .ಹೆಚ್ ವಕೀಲರಿಂದಃ</u>**

1. ವಿನೋಬಾ ನಗರದಿಂದ ಕಲ್ಲಹಳ್ಳಿಗೆ 24 ಅಡಿ ಅಗಲದ ಮುಖ್ಯ ರಸ್ತೆ ಇದೆ ಎಂದರೆ ಸರಿ. ರಸ್ತೆಯ ಎರಡೂ ಬದಿಯಲ್ಲಿ 5 ಅಡಿ ಅಗಲದ ಕಚ್ಚಾ ರಸ್ತೆ ಇರುತ್ತದೆ ಎಂದರೆ ಸರಿ. ಕಲ್ಲಹಳ್ಳಿ 'ಇ' ಬ್ಲಾಕ್ ನಲ್ಲಿ ನನ್ನ ಮನೆ ಇರುತ್ತದೆ ಎಂದರೆ ಸರಿ. ಡಿ ಬ್ಲಾಕ್ ನಂತರ ಇ ಬ್ಲಾಕ್ ಬರುತ್ತದೆ ಎಂದರೆ ಸರಿ . ರಸ್ತೆಯ ಉತ್ತರ ಭಾಗದಲ್ಲಿ ನಮ್ಮ ಮನೆ ಇದೆ ಎಂದರೆ ಸರಿ. ನಮ್ಮ ಮನೆಗೆ ಹೋಗುವುದಕ್ಕಾಗಿ ರಸ್ತೆಯ ಮಧ್ಯದಿಂದಲೇ ಉತ್ತರ ದಿಕ್ಕಿಗೆ ತಿರುವು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮನೆಗೆ ಹೋಗುವ ಕ್ರಾಸ್ ಇನ್ನು ಮುಂದೆ ಇದ್ದರೂ ಸಹ ರಸ್ತೆಯ ಮಧ್ಯದಿಂದಲೇ ಉತ್ತರ ದಿಕ್ಕಿಗೆ ತಿರುವು ಪಡೆದು ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಹೋಗಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ರಸ್ತೆಯ ಎಡಬದಿಯಲ್ಲಿ ಇದ್ದೆನು. ನಾನು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದರೆ ಅಪಘಾತವೇ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ರಸ್ತೆಯ ಮಧ್ಯಭಾಗದಲ್ಲಿ ಆಗಿದೆ. ನನ್ನ ಎದುರುನಿಂದ ಬಂದ ಮೋಟಾರ್ ಸೈಕಲ್ ವಿರುದ್ಧ ದಿಕ್ಕಿಗೆ ಬಂದು ನನಗೆ ಡಿಕ್ಕಿ ಪಡಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ . ಪೋಲಿಸ್ ದಾಖಲೆಗಳ ಬಗ್ಗೆ ಎಲ್ಲಾ ಮಾಹಿತಿ ಇರುತ್ತದೆ. ನ್ಯಾಯಾಲಯಕ್ಕೆ ನಿಪಿ-3 ಸ್ಥಳ ಪಂಚಾನಾಮೆಯ ಜೊತೆ ಪೋಲಿಸರು ತಯಾರಿಸಿದ ಕಚ್ಚಾ ನಕಾಶೆ ಹಾಗೂ ಅಪಘಾತ ಸ್ಥಳದ ಭಾವಚಿತ್ರವನ್ನು ಉದ್ದೇಶ ಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

3. ಸಾಕ್ಷಿಗೆ ಈಗ ಸ್ಥಳ ಪಂಚಾನಾಮೆಯ ಜೊತೆ ತಯಾರಿಸಿದ ಕಚ್ಚಾ ನಕಾಶೆ ಮತ್ತು ಭಾವಚಿತ್ರದ ದೃಢೀಕೃತ ಪ್ರತಿಯನ್ನು ತೋರಿಸಿದ್ದು, ಅದನ್ನು ಸಾಕ್ಷಿ ಒಪ್ಪಿಕೊಂಡ ಮೇರೆಗೆ ಪಂಚನಾಮೆಯನ್ನು ನಿಆರ್-1 ಹಾಗೂ ಕಚ್ಚಾ ನಕಾಶೆಯನ್ನು ನಿಆರ್-2 ಎಂದು ಗುರುತಿಸಲಾಯಿತು. ನಿಆರ್-2 ಕಚ್ಚಾ ನಕಾಶೆಯಲ್ಲಿ ಅಪಘಾತ ಸ್ಥಳವನ್ನು ರಸ್ತೆಯ ಮಧ್ಯಭಾಗದಲ್ಲಿ ತೋರಿಸಿರುತ್ತಾರೆ ಎಂದರೆ ಸರಿ. ನಾನು ಅಪಘಾತ ಸ್ಥಳದ ಕಚ್ಚಾ ನಕಾಶೆ ಮತ್ತು ಅಪಘಾತ ಸ್ಥಳದ ಭಾವಚಿತ್ರವನ್ನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ

ಎಂದರೆ ಸರಿಯಲ್ಲ. ನಾನು ಸ್ವಲ್ಪ ಜಾಗರೂಕನಾಗಿದ್ದರೆ ಅಪಘಾತ ತಪ್ಪಿಸಬಹುದಾಗಿತ್ತಲಾ ಎಂದರೆ ಸಾಕ್ಷಿ ಎದುರುನಿಂದ ಬರುತ್ತಿದ್ದ ಮೋಟಾರ್ ಸೈಕಲ್ ತುಂಬಾ ವೇಗವಾಗಿ ಬರುತ್ತಿದ್ದ ಎಂದು ಹೇಳುತ್ತಾರೆ. ಈ ಅಪಘಾತ ನನ್ನ ಹಾಗೂ ಎದುರುನಿಂದ ಬರುತ್ತಿದ್ದ ಮೋಟಾರ್ ಸೈಕಲ್ ಚಾಲಕನ ಇಬ್ಬರ ತಪ್ಪಿನಿಂದಲೂ ಆಗಿದೆ ಎಂದರೆ ಸರಿಯಲ್ಲ.

4. ನಾನು ಬಿ ಎ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಲೂಕರ್ ಎಲೆಕ್ಟ್ರಿಕ್ ಟೆಕ್ನಾಲಜಿ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಕಂಪನಿ ಕೇರಳಾದಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಸದರಿ ಕಂಪನಿಯಲ್ಲಿ ದಿಃ 25–07–2022 ರಿಂದ ಕೆಲಸ ಮಾಡುತ್ತಿದ್ದೆ. ಕಂಪನಿಯವರು ನನಗೆ 45,873/– ರೂಪಾಯಿ ತಿಂಗಳಿಗೆ ಸಂಬಳ ಕೊಡುತ್ತಿದ್ದರು. ಅವರು ಸಂಬಳವನ್ನು ನನ್ನ ಬ್ಯಾಂಕ್ ಖಾತೆಗೆ ಹಾಕುತ್ತಿದ್ದರು. ಅಪಘಾತ ದಿಃ 07–05–2023 ರಂದು ಆಗಿದೆ ಎಂದರೆ ಸರಿ. ಆಸ್ಪತ್ರೆ ಯಲ್ಲಿ 8 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆನು. ಆ ನಂತರ 2 ತಿಂಗಳು ಕೆಲಸಕ್ಕೆ ರಜೆ ಹಾಕಿದ್ದೆನು. 2023 ರ ಜುಲೈ ತಿಂಗಳ ಕೊನೆಯವರೆಗೂ ರಜೆ ಹಾಕಿದ್ದೆನು. ಆ ಬಗ್ಗೆ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ. ನಿಪಿ-11 ರ ಪ್ರಕಾರ ದಿಃ 02-05-2023 ರಂದು ನನ್ನ ಖಾತೆಗೆ ರೂ. 45,873/- ಎಪ್ರೀಲ್ ತಿಂಗಳ ಸಂಬಳ ಜಮಾ ಆಗಿದೆ ಎಂದರೆ ಸರಿ. ದಿಃ 03-04-2023 ರಂದು ರೂ. 45,873/- ಮಾರ್ಚ ತಿಂಗಳ ಸಂಬಳ ಜಮಾ ಆಗಿದೆ ಎಂದರೆ ಸರಿ. ದಿಃ 25-04-2023 ರಂದು ರೂ. 11,780/- ಜಮಾ ಆಗಿರುತ್ತದೆ ಎಂದರೆ ಸಾಕ್ಷಿಯು ಅದು ಸಂಬಳ ಅಲ್ಲ ಅದು ನನ್ನ ಖರ್ಚಿನ ಹಣ ಎಂದು ಹೇಳುತ್ತಾರೆ. ದಿಃ 03-06-2023 ರಂದು 28,886/- ರೂಪಾಯಿ ಜಮಾ ಆಗಿದೆ ಎಂದರೆ ಸರಿ. ನಿಪಿ-11 ರಲ್ಲಿ ಮೇಲೆ ಹೇಳಿದ ಮೊತ್ತ ಹೊರತು ಪಡಿಸಿ ಬೇರೆ ಯಾವುದೇ ಮೊತ್ತ ನನ್ನ ಖಾತೆಗೆ ಕಂಪನಿಯಿಂದ ಬಂದಿಲ್ಲ ಎಂದರೆ ಸರಿ.

5. ನಿಪಿ-10 ಮಾರ್ಚ್ , ಎಪ್ರೀಲ್ ಮತ್ತು ಮೇ ತಿಂಗಳ ಸ್ಯಾಲರಿ ಸ್ಲಿಪ್ ಎಂದರೆ ಸರಿ. ಮೇ ತಿಂಗಳಿನಲ್ಲಿ ನಾನು 7 ನೇ ತಾರೀಖಿನಿಂದ ಕೆಲಸಕ್ಕೆ ಹೋಗಿರುವುದಿಲ್ಲ. ಮೇ ತಿಂಗಳ ಪೂರ್ಣ ಸಂಬಳ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-10 ರಲ್ಲಿ ಮೇ ತಿಂಗಳ ಸಂಬಳ ಆರ್ ಟಿ ಜಿ ಎಸ್ ಮೂಲಕ ಜಮಾ ಆಗಿರುವ ಬಗ್ಗೆ ನಮೂದಿರುತ್ತದೆ ಎಂದರೆ ಸರಿಯಲ್ಲ. ನಿಪಿ-10 ರ ಪ್ರಕಾರ ನನಗೆ ಮೇ ತಿಂಗಳ ಸಂಬಳ 45, 873/- ಜಮಾ ಆಗಿರುತ್ತದೆ ಎಂದರೆ ಸಾಕ್ಷಿ 28,886/- ಮಾತ್ರ ಜಮಾ ಆಗಿದೆ ಎಂದು ಹೇಳುತ್ತಾರೆ. ನನ್ನ ಸ್ಯಾಲರಿ ಸ್ಲಿಪ್ ಗೂ ನನ್ನ ಬ್ಯಾಂಕ್ ಸ್ಟೇಟ್ ಮೆಂಟ್ ಗೂ ತಾಳೆ ಆಗುತ್ತಿಲ್ಲ ಎಂದರೆ ಸಾಕ್ಷಿಯು ಡಿಡಕ್ಷನ್ ಯಾಕೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-9 ರಂತೆ ನಾನು ಸ್ವಯಂ ನಿವೃತ್ತಿ ಪಡೆದಿರುತ್ತೇನೆ. ನಿಪಿ-9 ರಲ್ಲಿ ದಿಃ 25-07-2022

ರಿಂದ 31-07-2023 ರವರೆಗೆ ಕೆಲಸ ಮಾಡಿದ್ದೇನೆ ಎಂದು ನಮೂದಿದೆ ಎಂದರೆ ಸಾಕ್ಷಿ ಅದು ನೋಟಿಸು ಪಿರೀಡ್ ಎಂದು ಹೇಳುತ್ತಾರೆ. ನೋಟಿಸು ಪಿರೀಡ್ 30 ದಿನ ಇರುತ್ತದೆ. ಜೂನ್ ತಿಂಗಳಿನಲ್ಲಿ ನಾನು ಯಾವುದೇ ಕೆಲಸಕ್ಕೆ ಹೋಗಿರುವುದಿಲ್ಲ. ನಮ್ಮ ಕಂಪನಿಯವರು ಸರಿಯಾದ ದಾಖಲೆಗಳನ್ನು ಇಟ್ಟಿಲ್ಲಾ ಮತ್ತು ಸರಿಯಾದ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ಕಂಪನಿಯವರು ನನಗೆ ಅನುಕೂಲವಾಗಲಿ ಎಂದು ದಾಖಲೆಗಳನ್ನು ಸೃಷ್ಠಿ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಕಂಪನಿ ಈಗಲೂ ಸಹ ಚಾಲ್ತಿಯಲ್ಲಿರುತ್ತದೆ. ಕಂಪನಿಯ ಅಧಿಕಾರಿಗಳನ್ನು ಕರೆಸಿ ವಿಚಾರಣೆ ಮಾಡಲು ತೊಂದರೆ ಇರುವುದಿಲ್ಲ. 2022 ನೇ ಇಸ್ವಿಯ ಸ್ಯಾಲರಿ ಸರ್ಟಿಫಿಕೇಟ, ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ನನಗೆ ಅಷ್ಟೊಂದು ಸ್ಯಾಲರಿ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-10 ರಲ್ಲಿ ಯಾವ ದಿನಾಂಕದಂದು ಸ್ಯಾಲರಿ ಸ್ಲಿಪ್ ಜನರೇಟ್ ಆಯಿತು ಎಂದು ನಮೂದಿರುವುದಿಲ್ಲ ಎಂದರೆ ಸರಿ. ನನಗೆ ತಿಂಗಳಿಗೆ 15 ಸಾವಿರ ರೂಪಾಯಿ ಸಂಬಳ ಕೊಡುತ್ತಿದ್ದರು ಎಂದರೆ ಸರಿಯಲ್ಲ.

6. ಅಪಘಾತ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಹೆಲ್ಮೆಟ್ ಹಾಕಿದ ಬಗ್ಗೆ ಪೋಲಿಸ್ ದಾಖಲೆಗಳಲ್ಲಿ ನಮೂದಿಲ್ಲ ಎಂದರೆ ಸರಿಯಲ್ಲ. ಅಪಘಾತ ದಲ್ಲಿ ನನ್ನ ತಲೆಯ ಚಿಪ್ಪಿಗೆ ಹಾನಿಯಾಗಿರುತ್ತದೆ ಹಾಗೂ ಎಡಕಣ್ಣಿಗೆ, ಎರಡೂ ದವಡೆಗೆ ಪೆಟ್ಟಾಗಿ 7 ಹಲ್ಲುಗಳು ಬಿದ್ದು ಹೋಗಿರುತ್ತವೆ. ನಾನು ಹೆಲ್ಮೆಟ್ ಧರಿಸಿದ್ದರೆ ಈ ರೀತಿಯ ಗಾಯಗಳು ಆಗುವ ಸಾಧ್ಯತೆ ಇರಲಿಲ್ಲ ಎಂದರೆ ಸರಿಯಲ್ಲ.

7. ಅಪಘಾತವಾದ ತಕ್ಷಣ ನಾನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಗೆ ಹೋಗಿರುತ್ತೇನೆ. ನಂತರ ಮ್ಯಾಕ್ಸ ಆಸ್ಪತ್ರೆಯಲ್ಲಿ ಸಂಪೂರ್ಣ ಚಿಕಿತ್ಸೆ ಪಡೆದಿರುತ್ತೇನೆ. ಮ್ಯಾಕ್ಸ ಆಸ್ಪತ್ರೆಯಲ್ಲಿ ನಾರಾಯಣ ಪಣಜಿ ಹಾಗೂ ಅನುಭವ್ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ. ಕಣ್ಣಿನ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನನಗೆ ನೆನಪಿರುವುದಿಲ್ಲ. ಹಲ್ಲಿನ ಚಿಕಿತ್ಸೆಯನ್ನು ನಂತರ ಬೇರೆ ಕಡೆ ಮಾಡಿಸಿರುತ್ತೇನೆ. ಕುಸುಮಾ ಡೆಂಟಲ್ ಕ್ಲಿನಿಕ್ ನಲ್ಲಿ ಹಲ್ಲಿನ ಚಿಕಿತ್ಸೆ ಮಾಡಿಸಿರುತ್ತೇನೆ. ಕುಸುಮಾ ಡೆಂಟಲ್ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ದಾಖಲಾಗಿರುವುದಿಲ್ಲ. ಕುಸುಮಾ ಡೆಂಟಲ್ ಆಸ್ಪತ್ರೆ ಯಲ್ಲಿ ಎರಡು ಹಲ್ಲಿಗೆ ರೂಟ್ ಕೆನಲ್ ಚಿಕಿತ್ಸೆ ಮಾಡಿರುತ್ತಾರೆ, 1 ಹಲ್ಲಿಗೆ ಇಂಪ್ಲಾಂಟೇಶನ್ ಮಾಡಿರುತ್ತಾರೆ, ಬೇರೆ ಹಲ್ಲುಗಳಿಗೆ ಕ್ರೌನ್ ಹಾಕಿ ಕಳುಹಿಸಿರುತ್ತಾರೆ. ಪ್ರತಿಸಲ ಹೋದಾಗಲೂ ಅವರು ಬರೆದುಕೊಡುತ್ತಿದ್ದರು . ಕೇಸ್ ಶೀಟ್ ಮೆಂಟೇನ್ ಮಾಡಿರುವುದಿಲ್ಲ. ಅಂದಾಜು 15-17 ಬಾರಿ

ನಾನು ಅವರ ಬಳಿ ಚಿಕಿತ್ಸೆ ಪಡೆದಿರುತ್ತೇನೆ. ಅವರು ಬರೆದ ಕೊಟ್ಟ ಚೀಟಿಯನ್ನು ಹಾಜರು ಪಡಿಸಿರುತ್ತೇನೆ. ಪ್ರತಿಸಲ ಅವರು ಬರೆದುಕೊಡುತ್ತಿರಲಿಲ್ಲ. ಒಂದೇ ಚೀಟಿಯಲ್ಲಿ 4-5 ಬಾರಿ ಬರೆದುಕೊಟ್ಟಿರುತ್ತಾರೆ. ಆ ಚೀಟಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ. ಹಣದ ತೊಂದರೆ ಇದ್ದುದ್ದರಿಂದ ಹಣ ಹೊಂದಕೆ ಆದಾಗಲೆಲ್ಲ ಕುಸುಮಾ ಡೆಂಟಲ್ ಕ್ಲಿನಿಕ್ ನಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ದಿಃ 18-05-2025 ರಂದು 2,03,000/- ಬಿಲ್ ನ್ನು ಹೊರತು ಪಡಿಸಿ, ಕುಸುಮಾ ಡೆಂಟಲ್ ನಲ್ಲಿ ಚಿಕಿತ್ಸೆಪಡೆದ ಬಗ್ಗೆ ಯಾವುದೇ ಬೇರೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಪಡೆದ ಬಗ್ಗೆ ದಾಖಲೆ ಕೊಡಿ ಎಂದು ಕೇಳಲು ತೊಂದರೆ ಇರಲಿಲ್ಲ, ಆ ಬಗ್ಗೆ ದಾಖಲೆ ಇರುತ್ತದೆ. ಮ್ಯಾಕ್ಸ ಆಸ್ಪತ್ರೆಯಲ್ಲಿ ಸ್ವಲ್ಪ ಹಣವನ್ನು ನನ್ನ ಮನೆಯವರು ಪಾವತಿ ಮಾಡಿರುತ್ತಾರೆ ನಾನು ಗುಣಮುಖವಾದ ನಂತರ ನಾನು ಸ್ವಲ್ಪ ಹಣ ಪಾವತಿ ಮಾಡಿರುತ್ತೇನೆ.

8. ನಾನು ಕೆಲಸ ಮಾಡುತ್ತಿದ್ದ ಲೂಕರ್ ಕಂಪನಿ ರಕ್ಷಾ ಹೆಲ್ತ ಇನ್ಸುರೆನ್ಸ ಕಂಪನಿಯ ಜೊತೆ ಒಪ್ಪಂದ ಇರುತ್ತದೆ ಎಂದರೆ ಸರಿ. ರಕ್ಷಾ ಹೆಲ್ತ್ ಇನ್ಸುರೆನ್ಸ ಕಂಪನಿಯವರು ನನ್ನ ಚಿಕಿತ್ಸೆಯ ಬಾಬ್ತು 2,90,676/- ರೂಪಾಯಿಗಳನ್ನು ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಆಸ್ಪತ್ರೆಗೆ ಪಾವತಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಹಾಜರು ಪಡಿಸಿರುವ ದಾಖಲೆಯಲ್ಲಿ 2,90,676/- ರೂಪಾಯಿ ಕಡಿತ ಮಾಡಿದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನಮಗೆ ಯಾವುದೇ ದಾಖಲೆ ಕೊಡುವುದಿಲ್ಲ ಎಂದು ಹೇಳುತ್ತಾರೆ. ದಿಃ 13-05-2023 ರ ಫೈನಲ್ ಬಿಲ್ ರೂ.3,80,200/- ಗಳನ್ನು ಆಸ್ಪತ್ರೆ ಯ ಸಿಬ್ಬಂದಿಗಳ ಜೊತೆ ಮಿಲಾಪೆಯಾಗಿ ಸೃಷ್ಠಿ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ರೂ.3,80,200/- ಮತ್ತು ರೂ. 2,03,000/- ರೂಪಾಯಿಗಳನ್ನು ಎದುರುದಾರ ಇನ್ಸುರೆನ್ಸ ಕಂಪನಿಯವರು ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

9. ಬಸವಾಮೃತ ಮೆಡಿಕಲ್ ನಿಂದ ನಾನು ಯಾವುದೇ ಔಷಧಿ ಖರೀದಿಸಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೇ ಸಲಹಾ ಚೀಟಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆ ಯಲ್ಲಿದ್ದಾಗ ಪಡೆದ ಔಷಧಿಗಳಿಗೂ ಹಾಗೂ ಆಸ್ಪತ್ರೆ ಯಿಂದ ಬಿಡಗಡೆಯಾದ ನಂತರ ಪಡೆದ ಔಷಧಿಗಳಿಗೂ ಅಜಗಜಾಂತರ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಕುಸುಮಾ ಡೆಂಟಲ್ ಕ್ಲಿನಿಕ್ ಮತ್ತು ಸ್ವಸ್ತಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಯಾವುದೆ ನಮೂದು ಇಲ್ಲ ಎಂದರೆ ಸರಿಯಲ್ಲ. ಮ್ಯಾಕ್ಸ ಆಸ್ಪತ್ರೆಯ ಡಿಸ್ಚಾರ್ಜ ಸಮರಿಯಲ್ಲಿ ಹಲ್ಲಿನ

ಚಿಕಿತ್ಸೆಯ ಬಗ್ಗೆ ನಮೂದಿರುತ್ತದೆ ಎಂದರೆ ಸರಿ. ನಾನು ಮ್ಯಾಕ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖನಾಗಿದ್ದೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಕೆಲಸ ಮಾಡಲು ಸಮರ್ಥನಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಹೇಳಿರುವ ಸಂಗತಿಗಳಿಗೂ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಾನು ದಾವಣಗೆರೆಯ ಎಸ್ ಎಸ್ ಐ ಆಸ್ಪತ್ರೆ ಯಲ್ಲಿ ಡಾ. ನಿತಿನ್ ಅವರ ಬಳಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ತಲೆ ನೋವು ಬರುತ್ತಿತ್ತು , ಮೂಗಿನ ಗ್ರಹಣ ಶಕ್ತಿ ಇರಲಿಲ್ಲ. ಕಣ್ಣಿನ ವಿಜನ್ ಸಮಸ್ಯೆ ಇತ್ತು ಅದನ್ನು ಎಸ ಎಸ ಐ ಆಸ್ಪತ್ರೆ ಯಲ್ಲಿ ತೋರಿಸಿರುತ್ತೇನೆ. ನಾನು 3 ಬಾರಿ ಅಲ್ಲಿ ತೋರಿಸಿರುತ್ತೇನೆ . ಅಲ್ಲಿ ತೋರಿಸಿದ ಬಗ್ಗೆ ಒ ಪಿಡಿ ಕಾರ್ಡ ಹಾಜರು ಪಡಿಸಿರುತ್ತೇನೆ. ಎಸ್ ಎಸ್ ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಬಿಲ್ ಹಾಜರು ಪಡಿಸಿರುತ್ತೇನೆ. ನಾನು ಡಾ. ನಿತಿನ್ ಅವರ ಕೇವಲ ಅಂಗನ್ಯೂನ್ಯತೆ ಪಡೆಯಲು ಮಾತ್ರ ಹೋಗಿದ್ದೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲದೇ ಇದ್ದರೂ ಸಹ ನನಗೆ ಸಹಾಯ ಮಾಡುವುದಕ್ಕಾಗಿ ಸುಳ್ಳು ಅಂಗನ್ಯೂನ್ಯತೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದಲೆ ಆಗಿದೆ ಎಂದರೆ ಸರಿಯಲ್ಲ. ನನಗೆ ಎಲ್ಲ ಕೆಲಸ ಮಾಡಲು ನಾನು ಸಮರ್ಥ ಇದ್ದೆನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.